ದಿಃ 13-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ವಾದಿ ಪರ ವಕೀಲರಾದ ಶ್ರೀ ಬಿ.ಆರ್.ಎನ್. ರವರಿಂದಃ-**

ನಾನು 3 ನೇ ತರಗತಿವರೆಗೆ ಓದಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬರದೆ ಇರುವುದರಿಂದ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಯಾರು ಯಾರ ವಿರುದ್ಧ ದಾಖಲಿಸಿರುತ್ತಾರೆ ಮತ್ತು ಯಾವ ವಿಚಾರಕ್ಕಾಗಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ನನ್ನ ವಿರುದ್ಧ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ನಮ್ಮ ವಿರುದ್ಧ ಯಾವ ವಿಚಾರಕ್ಕಾಗಿ ದಾವೆಯನ್ನು ದಾಖಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯಲ್ಲಿ ನಾವು ತಕರಾರನ್ನು ಹಾಕಿದ್ದೆವು, ಸದರಿ ದಾವೆಯು ವಜಾ ಆಗಿರುತ್ತದೆ. ಸದರಿ ದಾವೆಯು ಯಾವಾಗ ವಜಾ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯು ಡಿ.ಸಿ. ನ್ಯಾಯಾಲಯದಲ್ಲಿ ಇತ್ತು.

**2.** ಈ ನ್ಯಾಯಾಲಯದಿಂದ ನನಗೆ 1 ನೇ ಪ್ರತಿವಾದಿಯು ನೋಟಿಸನ್ನು ನೀಡಿರುತ್ತಾರೆ, ಅದಕ್ಕಾಗಿ ನಾನು ಈ ನ್ಯಾಯಾಲಯಕ್ಕೆ ಬಂದಿರುತ್ತೇನೆ. 1 ನೇ ಪ್ರತಿವಾದಿಯು 12 ವರ್ಷಗಳ

ಹಿಂದೆ ನೋಟಿಸನ್ನು ನೀಡಿದ್ದರು, ಯಾವ ವಿಚಾರಕ್ಕಾಗಿ ನೋಟಿಸನ್ನು ನೀಡಿದ್ದರು ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ನನಗೆ ಮಾತ್ರ ನೋಟಿಸ್ ಬಂದಿದ್ದು , ಬೇರೆಯವರಿಗೆ ಬಂದಿರುವುದಿಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**